ವಿರುದ್ಧ ತಾನು ಕಂಡುಕೊಂಡ ಹೋರಾಟದ ರೀತಿ. ಪ್ಯಾಲೆಸ್ತೇನಿಯಾದ ಮಹಿಳೆ ನೆಹಿಯಾ ಕದನ ವಿರಾಮ ಘೋಷಿಸುತ್ತಿದ್ದಂತೆ ಅರೆನಿಮಿಷವೂ ತಡಮಾಡದೆ ಮನೆಯಿಂದ ಹೊರನಡೆಯುತ್ತಿದ್ದಳು. ತನಗೆ ಹಾಗೂ ತನ್ನ ನೆರೆಹೊರೆಯವರಿಗೆಲ್ಲ ಆಗುವಷ್ಟು ಎಷ್ಟು ಸಾಧ್ಯವೋ ಅಷ್ಟು ಬ್ರೆಡ್ ಮತ್ತು ಹಿಟ್ಟನ್ನು ಸಂಗ್ರಹಿಸಿ ತರುತ್ತಿದ್ದಳು. ಮಾರನೆಯ ದಿನ ಮತ್ತೆ ಯುದ್ಧ ಶುರುವಾದರೆ ಊಟಕ್ಕೆ ತೊಂದರೆಯಾಗಬಾರದಲ್ಲ ಅಂತ. ಚರ್ಚ್ ಒಂದರಲ್ಲಿ ಜನಾಂಗೀಯ ದ್ವೇಷದ ಹಿನ್ನೆಲೆಯಲ್ಲಿ ನಡೆದ ನರಮೇಧವೊಂದರಲ್ಲಿ ಬದುಕುಳಿದ ವಯೊಲೆಟ್‌ಳದು ಮತ್ತೊಂದು ಕತೆ. ಆಕೆ ಆ ಹತ್ಯಾಕಾಂಡದ ಸಮಯದಲ್ಲಿ ಹೆಣಗಳನ್ನ ಹೂಳುತ್ತ, ಮನೆಗಳನ್ನ ಸ್ವಚ್ಛ ಮಾಡುತ್ತಾ, ಬೀದಿಗಳನ್ನು ಸ್ವಚ್ಛ ಮಾಡುತ್ತಲೇ ಇದ್ದಳು. ಯುದ್ಧದ ಭೀಕರತೆಯ ನಡುವೆ ಬದುಕನ್ನು ಕಾಪಿಟ್ಟು ಪೊರೆಯುತ್ತಿರುವ ಇಂತಹ ಮಹಿಳೆಯರ ಕತೆಗಳನ್ನು ನಾವು ನೋಡುತ್ತಲೇ ಇಲ್ಲ. ಯುದ್ಧ ಸಮಯದಲ್ಲೂ ಪ್ರೀತಿ ಮಾಡುವ ಮಂದಿ, ಶಾಲೆಗೆ ಹೋಗುವ ಮಂದಿ, ಮದುವೆಯಾಗುವವರು, ವಿಚ್ಛೇದನ ಪಡೆಯುವವರು, ದಿನದ ದೈನಿಕಗಳಲ್ಲಿ ಮುಳುಗಿರುವ ಜನ ಇದ್ದೇ ಇರುತ್ತಾರೆ. ಬದುಕು ನಿಲ್ಲುವುದಿಲ್ಲ. ಮಹಿಳೆಯರು ಈ ಎಲ್ಲ ಕ್ಷಣಗಳಲ್ಲೂ ಬದುಕನ್ನು ಕಟ್ಟುತ್ತಲೇ ಇರುತ್ತಾರೆ.

ಪ್ರತಿ ಯುದ್ಧಕ್ಕೂ ಎರಡು ಮುಖವಿರುತ್ತದೆ. ಒಂದು ಮುಖ ಹೋರಾಟವಾದರೆ ಮತ್ತೊಂದು ಬದುಕು ತನ್ನದೇ ಗತಿಯಲ್ಲಿ ಸಾಗುತ್ತಿರುವುದು. ಒಂದು ಯುದ್ಧ ಗೆಲ್ಲುವುದಾದರಲ್ಲಿ ಆಸಕ್ತವಾಗಿದ್ದರೆ ಮತ್ತೊಂದು ಬದುಕನ್ನು ಗೆಲ್ಲಿಸುವುದರಲ್ಲಿ ಆಸಕ್ತವಾಗಿರುತ್ತದೆ. ಒಂದು ಮುಖದ ಬಗ್ಗೆ ಮುಂಚೂಣಿಯಲ್ಲಿರುವ ಮಂದಿ ಮಾತಾಡಿದರೆ ಮತ್ತೊಂದರ ಕತೆಯನ್ನು ಕೇಳುವ ಮಂದಿ ಹಿಂದಿನ ಸಾಲಿನಲ್ಲಿರುತ್ತಾರೆ. ಒಂದು ಮುಖದ ಚರ್ಚೆ ಶಾಂತಿಯಿಂದ ಯುದ್ಧ ಕೊನೆಯಾಗುತ್ತೆ ಅಂದರೆ ಮತ್ತೊಂದು ಮುಖ ಶಾಂತಿಯೆಂದರೆ ಸ್ಕೂಲಿಗೆ, ಕೆಲಸಕ್ಕೆ ಹೋಗುವುದು ಅನ್ನುತ್ತದೆ. ಹಾಗಿದ್ದರೆ ಶಾಂತಿ ಯಾವುದು ಅನ್ನುವುದು

